IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಸರ್ವಜ್ಞನ ವಚನಗಳಲ್ಲಿ ಜೀವನ ಮೌಲ್ಯಗಳು

**ಡಾ. ಲಕ್ಷ್ಮೀನರಸಮ್ಮ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್ – ೫೭೨೧೩೦

ಸರ್ವಜ್ಞನ ಹೆಸರೇ ಸೂಚಿಸುವಂತೆ ಸಂಸ್ಕೃತದಲ್ಲಿ ಎಲ್ಲವನ್ನು ತಿಳಿದವನು ಎಂಬರ್ಥವಿದೆ. ತ್ರಿಪದಿಯ ಪ್ರಕಾರದಲ್ಲಿ ವಚನಗಳನ್ನು ರಚಿಸಿದ್ದ ಸರ್ವಜ್ಞ ಸುಮಾರು ೧೬ನೇ ಶತಮಾನದ ಆದಿ ಭಾಗದಲ್ಲಿ ಜೀವಿಸಿದ್ದನೆಂದು ತಿಳಿಯಲಾಗಿದೆ. ಪುಷ್ಪದತ್ತ ಎಂಬ ಹೆಸರು ಈತನ ನಿಜನಾಮಧೇಯವಾಗಿದ್ದು ಸರ್ವಜ್ಞ ಎಂಬುದು ಕಾವ್ಯನಾಮವಾಗಿದೆ. ಈತ ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ ತಾಲ್ಲೂಕಿನ ಹಂಬಲೂರಿನ ಮಾಸೂರಿನಲ್ಲಿ ಜನಿಸಿರಬಹುದೆಂದು ಗ್ರಹಿಸಲಾಗಿದ್ದು ಕವಿಯಾಗಿ, ವಾಸ್ತವಾದಿಯಾಗಿ, ತತ್ವಜ್ಞಾನಿಯಾಗಿ, ಜನಮಾನಸದಲ್ಲಿ ತ್ರಿಪದಿಗಳ ಮೂಲಕ ನಿಂತಿದ್ದಾನೆ. ಈಗಂತೂ ಮಾಸೂರು ಎಂಬ ಊರು 'ಸರ್ವಜ್ಞನ ಮಾಸೂರು' ಎಂಬುದಾಗಿ ಹೆಸರನ್ನು ಪಡೆದಿದೆ. ಸರ್ವಜ್ಞನ ಹೆತ್ತ ತಾಯಿ ಕುಂಬಾರ ಮಾಳೆ. ಸಾಕುತಾಯಿ ಮಲ್ಲಕ್ಕ ಹಾಗೂ ತಂದೆ ಬಸವರಾಜು. ಸರ್ವಜ್ಞನು ತನ್ನ ಬಗ್ಗೆ ತಾನು ಯಾರೆಂದು ತ್ರಿಪದಿಯ ಮೂಲಕ ವ್ಯಕ್ತಪಡಿಸುತ್ತಾ

"ಅಂದಿನ ಪುಷ್ಪದತ್ತ ಬಂದ ವರರುಚಿಯಾಗಿ
ಮುಂ ದೇವಸಾಲೆ ಸರ್ವಜ್ಞನೆಂದೆನಿಸಿ
ನಿಂದವನು ತಾನೇ ಸರ್ವಜ್ಞ"

ನೆಂದು ಜಗತ್ ಜಾಹಿರಗೊಳಿಸಿದ್ದಾನೆ. ತಾನು ಪುಷ್ಪದತ್ತನಾಗಿ ನಂತರ ಸರ್ವಜ್ಞನಾದೆ ಎಂಬುದನ್ನು ಈ ವಚನದಲ್ಲಿ ಅಭಿವ್ಯಕ್ತಿ ಪಡಿಸಿದ್ದಾನೆ. ಸರ್ವಜ್ಞನು ಯಾರೆಂಬುದನ್ನು ಆತನ ಈ ತ್ರಿಪದಿಯಲ್ಲಿ ಗ್ರಹಿಸಬಹುದಾಗಿದೆ. ಆತನ ಜ್ಞಾನ ಎಷ್ಟರಮಟ್ಟಿಗೆ ತತ್ವವಾಗಿತ್ತು ಎಂಬುದನ್ನು ಆತಾನೆ ಸ್ವತಃ ತನ್ನ ಈ ವಚನದಲ್ಲಿ

"ಸರ್ವಜ್ಞನೆಂಬುವನು ಗರ್ವದಿಂದಾದವನೆ
ಸರ್ವರೊಳಗೊಂದು ನುಡಿಗಲಿತು ವಿದ್ಯೆಯ
ಪರ್ವತವೇ ಆದ ಸರ್ವಜ್ಞ"

ಎಂಬಲ್ಲಿ ಭಿಕ್ಷೆ ಯಾಚಿಸುತ್ತಾ ಎಲ್ಲರಿಂದ ಅಕ್ಷರವನ್ನು ಕಲಿತು ವಿದ್ಯೆಯ ಪರ್ವತನಾಗಿರುವವನು ಸರ್ವಜ್ಞ. ಸರ್ವಜ್ಞನ ವಚನಗಳು ಧಾರ್ಮಿಕವಾಗಿ, ಸಾಮಾಜಿಕವಾಗಿ, ನೈತಿಕವಾಗಿ ಮೂಲ ನೆಲೆಯಾಗಿ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅಗ್ರಸ್ಥಾನವನ್ನು ಪಡೆದಿವೆ. ಗರ್ವದಿಂದ ನಡೆಯುತ್ತಿದ್ದ ಸರ್ವಜ್ಞ ವಿದ್ಯೆ ಪಡೆಯುವ ಮುಖೇನ ಅಹಂ ಬಿಟ್ಟು ವಿದ್ಯೆಯ ಪರ್ವತದಂತೆ ತನ್ನ ವ್ಯಕ್ತಿತ್ವ ಹಾಗೂ ಜ್ಞಾನವನ್ನು ರೂಪಿಸಿಕೊಂಡಿದ್ದಾನೆ. ಸರ್ವಜ್ಞನ ವಚನಗಳನ್ನು ತ್ರಿಪದಿ ಪ್ರಕಾರದಲ್ಲಿರುವುದರಿಂದ ಸರ್ವಜ್ಞನ ತ್ರಿಪದಿಗಳು ಎಂತಲೂ ಕರೆಯುವ ರೂಡಿಯಲ್ಲಿದೆ. ಸರ್ವಜ್ಞ ತನ್ನ ವಚನಗಳಲ್ಲಿ ಜೀವನ ಮೌಲ್ಯಗಳ ಬಗ್ಗೆ ಹೆಚ್ಚಿನ ಆದ್ಯತೆ ನೀಡಿದ್ದಾನೆ. ಈ ಜಗತ್ತಿನಲ್ಲಿ ಮನುಷ್ಯ ಜೀವಂತನಾಗಿರುವುದು ಅನ್ನದಿಂದಲೇ. ಅನ್ನಕ್ಕೆ ನಮ್ಮ ಸಂಸ್ಕೃತಿಯಲ್ಲಿ ಅತ್ಯಂತ ಪ್ರಧಾನವಾದ ಸ್ಥಾನವಿದೆ. ಅನ್ನವಿಲ್ಲದೆ ಮನುಷ್ಯ ಬದುಕಲಾರ. ಭಿಕ್ಷೆ ಬೇಡಿಯಾದರೂ ಹೊಟ್ಟೆಗೆ ಅನ್ನವನ್ನು ಗಿಟ್ಟಿಸಿಕೊಳ್ಳುತ್ತಾನೆ. ಅನ್ನವನ್ನು 'ಅನ್ನಪೂರ್ಣೇಶ್ವರಿ', 'ಲಕ್ಷ್ಮಿ' ಎಂದು ಕರೆದಿರುವುದನ್ನು ಪುರಾಣಗಳಲ್ಲಿ ಕಾಣಬಹುದು. ದ.ರಾ. ಬೇಂದ್ರೆಯವರ 'ಅನ್ನಯಜ್ಞ ಎಂಬ ಕವಿತೆಯಲ್ಲಿ ಅಣ್ಣಗಳಿರ ಅನ್ನದಲ್ಲಿ ಮಣ್ಣನ್ನು ಕಲಸಬೇಡಿ ತೆನೆಯ ಧ್ವಜ ನಿಲ್ಲಲಿ' ಎಂಬ ಸಾಲುಗಳದ್ದು ಅನ್ನ ಪರಬ್ರಹ್ಮ ಹಾಗೂ ಬದುಕಲಿಕ್ಕೆ ಅತ್ಯಂತ ಮುಖ್ಯ ಆಹಾರವೆಂಬುದನ್ನು ವ್ಯಕ್ತಪಡಿಸುತ್ತದೆ. ಇಂದಿಗೂ ನಮ್ಮ ಮನೆಗಳಲ್ಲಿ ಅನ್ನವನ್ನು ಎಸೆದರೆ ಹಿರಿಯರು ಅನ್ನವನ್ನು ಎಸೆದರೆ ಪಾಪ ಬರುತ್ತದೆ, ಅನ್ನವು ಅನ್ನಪೂರ್ಣೇಶ್ವರಿ ಅವಳು ಕೋಪಗೊಂಡು ಅನ್ನ ನೀಡುವುದಿಲ್ಲವೆಂದು ಹೇಳುವ ಮುಖಾಂತರ ಅನ್ನವನ್ನು ಧೂಳಿನಲ್ಲಿ

ಹಾಕದೆ ಗೌರವಿಸಬೇಕೆಂದು ತಿಳಿಸಿದ್ದಾರೆ. ಈಗಲೂ ಅನ್ನಕ್ಕೆ ಹಿರಿಯರು ಹೆಚ್ಚಿನ ಮನ್ನಣೆಯನ್ನು ನೀಡುತ್ತಿರುವುದು ಗಮನೀಯ. ಸರ್ವಜ್ಞ ತನ್ನ ವಚನಗಳಲ್ಲಿ ಅನ್ನಕ್ಕೆ ಮಹತ್ವವನ್ನು ನೀಡಿರುವುದು ಆತನಿಗಿರುವ ಹಸಿವಿನ ತಾಂಡವತೆಗೆ ಅನ್ನದ ಅಗತ್ಯತೆ ಅತ್ಯಂತ ಮುಖ್ಯವೆಂಬ ಧೋರಣೆಗೆ ಕನ್ನಡಿ ಹಿಡಿದಂತಿದೆ. ಸರ್ವಜ್ಞನು

"ಅನ್ನದೇವರ ಮುಂದೆ ಇನ್ನು ದೇವರು ಉಂಟೆ ?
ಅನ್ನವಿರುವ ತನಕ ಪ್ರಾಣವು ; ಜಗದೊಳಗೆ
ಅನ್ನವೇ ದೈವ ಸರ್ವಜ್ಞ ! "

ಎಂಬ ತ್ರಿಪದಿಯ ವಚನ ಅತ್ಯುತ್ತಮವಾದ ಮೌಲ್ಯವನ್ನು ಹೊಂದಿದೆ. ಪ್ರಾಣ ಇರಬೇಕಾದರೆ ಅನ್ನವೇ ಮುಖ್ಯವೆಂದು ಹಾಗೂ ಅನ್ನವೇ ದೇವರೆಂದು ಇದರ ಮುಂದೆ ಯಾವ ದೇವರು ಇಲ್ಲವೆಂದು ಘಂಟಾಘೋಷವಾಗಿ ಸರ್ವಜ್ಞ ತಿಳಿಸಿದ್ದಾನೆ. ಅನ್ನಯಿದೆ ಎಂದು ನಾಲ್ಕು ಹೊತ್ತು ತಿಂದು ರೋಗಭರಿಸಿಕೊಳ್ಳಬಾರದೆಂದು ಅನ್ನವನ್ನು ಮಿತವಾಗಿ ಬಳಸಬೇಕೆಂದು

"ಅಕ್ಕಿಯನ್ನುಂಬುವನು ಹಕ್ಕಿಯಂತಾಗುವನು;
ಜೋಳವನ್ನು ತಿಂಬುವನು ತೋಳದಂತಾಗುವನು
ನವಣೆಯನ್ನು ಉಂಬುವನು ಹವಣಾಗಿ ಇರುತಿಹನು
ರಾಗಿಯನ್ನು ಉಂಬುವ ನಿರೋಗಿಯೆಂದೆನಿಸುವನು"

ಎಂಬ ವಚನದಲ್ಲಿ ಅನ್ನಕ್ಕಿಂತ ಮಿಗಿಲಾದುದು ರಾಗಿಯಾಗಿದ್ದು, ರಾಗಿಯನ್ನು ಅತಿ ಹೆಚ್ಚು ಬಳಸುವುದರಿಂದ ಮನುಷ್ಯ ರೋಗದಿಂದ ಮುಕ್ತನಾಗುತ್ತಾನೆ ಎಂದು ರಾಗಿಯ ಮಹತ್ವವನ್ನು ಸಾರಿದ್ದಾನೆ. ಕನಕದಾಸರು ರಾಮಧಾನ್ಯ ಚರಿತೆಯಲ್ಲಿ ನರೆದಲಗನಾದ ರಾಗಿ ಬಡವರ ಧಾನ್ಯವಾಗಿದ್ದು ಕಡಿಮೆ ಮೌಲ್ಯಕ್ಕೆ ದೊರೆಯುವುದೆಂದು ಹಾಗೂ ವ್ರೀಹಿ (ಅಕ್ಕಿ) ಶ್ರೀಮಂತರ ಧಾನ್ಯವೆಂದು ಚರ್ಚಿಸಿರುವ ವಿಷಯ ಸರ್ವಜ್ಞನ ಮೇಲೆ ಪ್ರಭಾವ ಬೀರಿರಬಹುದು.

ಹಸಿಯದಿಡೆ ಉಣಬೇಡ ಹಸಿದು ಮತ್ತಿರಬೇಡ
ಬಿಸಿಬೇಡ ತಂಗಳುಣಬೇಡ ವೈದ್ಯರ
ಬೆಸಸಲೇ ಬೇಡ ಸರ್ವಜ್ಞ !

ಎಂಬ ತ್ರಿಪದಿಯಲ್ಲಿ ಸರ್ವಜ್ಞ ಮನುಷ್ಯನಿಗೆ ಆಹಾರ ಪದ್ಧತಿಯ ಬಗ್ಗೆ ಎಚ್ಚರಿಕೆಯನ್ನು ನೀಡಿದ್ದಾನೆ. ಆಗಾಗ ಹಸಿಯದೆ ಊಟವನ್ನು ಸೇವಿಸಬಾರದೆಂದು ಹಸಿದು ಸಂಕಟ ಪಡೆಯದೆ ತಂಗಳನ್ನು ಉಂಡು ರೋಗವನ್ನು ಹೊಂದಿ ತತ್ತರಿಸುತ್ತ ವೈದ್ಯರ ಬಳಿಗೆ ಹೋಗಲೇಬಾರದೆಂದು ತಿಳಿಸುತ್ತಾ ತಂಗಳ ಅನ್ನವನ್ನು ನಿರಾಕರಿಸಿದ್ದಾರೆ. ಸರ್ವಜ್ಞ ತನ್ನ ತ್ರಿಪದಿಗಳಲ್ಲಿ ಅನುಭವದ ಮಾತುಗಳನ್ನೇ ಹಾಡಿರುವುದು ಅಕ್ಷರಃ ಸತ್ಯ. ಜೀವನದಲ್ಲಿ ಆಹಾರ ಮುಖ್ಯವೆಂಬ ಉತ್ತಮ ಮೌಲ್ಯದ ಬಗ್ಗೆ ವೈದ್ಯರಂತೆ ತನ್ನ ಭಾಷೆಯಲ್ಲಿ ಕಟ್ಟಿಕೊಟ್ಟಿರುವುದು ಸರ್ವಜ್ಞನ ಜ್ಞಾನ ಎಷ್ಟಿತ್ತು ಎಂಬುದನ್ನು ತ್ರಿಪದಿಗಳು ಹೊರಹೊಮ್ಮಿಸುತ್ತವೆ. ಜನಪದರಲ್ಲಿ ಹೆಚ್ಚು ಊಟ ಮಾಡಿದರೆ ಮನುಷ್ಯ ಬೇಗ ತನ್ನ ಆಯಸ್ಸನ್ನು ಕಳೆದುಕೊಳ್ಳುತ್ತಾನೆ ಎಂಬ ಮಾತಿದೆ. ಇದಕ್ಕನುಸಾರವಾಗಿ ಸರ್ವಜ್ಞ

"ನಾಲಗೆಯ ಕಟ್ಟಿದನು ಕಾಲನಿಗೆ ದೂರನಿಹ
ನಾಲಗೆಯು ರುಚಿಯು ಮೇಲಾಡುತ್ತಿರಲವನ
ಕಾಲ ಹತ್ತಿರವು ಸರ್ವಜ್ಞ"

ಎಂಬ ತ್ರಿಪದಿಯಲ್ಲಿ ನಾಲಗೆಯ ಮಾತನ್ನು ಕೇಳದೆ ಚಪಲವನ್ನು ಬಿಟ್ಟು ಆಹಾರವನ್ನು ಸೇವಿಸಿದರೆ ಮನುಷ್ಯ ದೀರ್ಘಕಾಲ ಬದುಕುತ್ತಾನೆಂದು ವ್ಯಕ್ತಪಡಿಸಿದ್ದಾನೆ. ಷಡ್ರಸಗಳನ್ನು ಕಡೆಗಣಿಸಿ ನಾಲಗೆ ರುಚಿಯನ್ನು ಬಿಡಬೇಕೆಂದು ಹಾಗೂ ಕಾಲನಿಗೆ ತುತ್ತಾಗದೆ ದೀರ್ಘಕಾಲ ಬದುಕಲು ಸಾಧ್ಯವೆಂದು ಎಚ್ಚರಿಕೆಯನ್ನು ನೀಡಿದ್ದಾನೆ. ಬೇಗ ಸಾವನ್ನು ಪಡೆಯುವುದು ಕೂಡ ನಮ್ಮ ಆಹಾರದ ಸೇವನೆಯ ಅವಲಂಬನೆ ಕಾರಣವೆಂದು ಹಾಗೂ ಮಿತಿಯಲ್ಲಿ ಆಹಾರವನ್ನು ಸೇವಿಸಬೇಕೆಂದು ಜನ ಸಾಮಾನ್ಯರಲ್ಲಿ ಕರೆ ನೀಡಿದ್ದಾನೆ.

ಅನ್ನದಾನದ ವಿವೇಕದ ಮಾತುಗಳು ಸರ್ವಜ್ಞನ ತ್ರಿಪದಿಗಳಲ್ಲಿ ಹೇರಳವಾಗಿದ್ದು ಆತನಿಗಿರುವ ಹಸಿವಿನ ಬಗ್ಗೆ ಇದ್ದಂತಹ ನೋವು ಗೋಚರವಾಗುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಅನ್ನವನ್ನು ದಾನ ಮಾಡಿದರೆ ಪುಣ್ಯ ಪ್ರಾಪ್ತಿಯಾಗುತ್ತದೆ. ಮುಂದೊಂದು ದಿನ ನಾವು ಹಸಿದಾಗ ನಮಗೆ ಯಾರಾದರೂ ಅನ್ನವನ್ನು ಕೊಡುತ್ತಾರೆ ಎಂಬ ನಂಬಿಕೆ ಇದ್ದು, ಮಕ್ಕಳಿಂದ ಹಿಡಿದು ಮುದುಕರವರೆಗೆ ಅನ್ನದಾನದ ಬಗ್ಗೆ ಬಹಳ ತಿಳುವಳಿಕೆ ಇರುವುದು ಸತ್ಯ. ಇದನ್ನೇ ಸರ್ವಜ್ಞ ತನ್ನ ವಚನಗಳಲ್ಲಿ ವಿಶಿಷ್ಟ ರೀತಿಯಲ್ಲಿ ಮನುಷ್ಯ ದಾನಿಯಾಗುವಂತೆ ಪ್ರೇರೇಪಿಸಿದ್ದಾನೆ. ಅನ್ನವನ್ನು ನೀಡುವುದರಿಂದ ಕೈಲಾಸವನ್ನು ನೋಡಲು ಸಾಧ್ಯವೆಂದು ನಿರೂಪಿಸುತ್ತಾ

“ಅನ್ನವನ್ನು ಇಕ್ಕುವುದು ನನ್ನಿಯನು ನುಡಿಯುವುದು
ತನ್ನಂತೆ ಪರರ ಬಗೆದಡೆ ಕೈಲಾಸ
ಬಿನ್ನಾಣವಕ್ಕು ಸರ್ವಜ್ಞ”

ಎಂಬಲ್ಲಿ ಅನ್ನವನ್ನು ದಾನ ಮಾಡುವುದು, ಹಿತವಾಗಿ ಪ್ರೀತಿಯಿಂದ ಮಾತನಾಡಿಸುವುದು ಇವುಗಳಿಂದ ಕೈಲಾಸ ಹತ್ತಿರವಾಗುತ್ತದೆ. ತನ್ನಂತೆ ಬೇರೆಯವರು ಎಂದು ತಿಳಿಯಬೇಕೆಂಬ ಅರಿವನ್ನು ಮೂಡಿಸಿದ್ದಾನೆ. ಬೇರೆಯವರ ಬಗೆಗೆ ಅರಿತು ನಡೆದರೆ ಬದುಕು ಸಾರ್ಥಕವೆಂದು ತಿಳಿಸಿದ್ದಾನೆ. ದಾನ ಮಾಡದವರ ಬಗೆಗೆ ಸರ್ವಜ್ಞನಿಗೆ ಬಹಳ ವಿರೋಧವಿದೆ. ಏಕೆಂದರೆ ಸರ್ವಜ್ಞ ಭಿಕ್ಷೆ ಬೇಡಿ ಹೊಟ್ಟೆ ತುಂಬಿಸಿಕೊಳ್ಳುವ ಜೀವನವನ್ನು ಹೊಂದಿದ್ದು ಭಿಕ್ಷೆ ಸಿಗದಿದ್ದಾಗ ನೋವು ಅಧಿಕವಾಗಿ ದಾನ ಮಾಡದವನು ಕಳ್ಳನಿಗೆ ದಾರಿಯಾಗುತ್ತಾನೆಂಬ ಇದಕ್ಕನುಸಾರವಾಗಿ ಸರ್ವಜ್ಞನು ವಿಷಯವನ್ನು ನಿರೂಪಿಸದ್ದಾನೆ.

“ಉಳ್ಳಲ್ಲಿ ಉಣ್ಣಲ್ಲಿಲ್ಲ ಉಳ್ಳಲ್ಲಿ ಉಡಲಿಲ್ಲ
ಉಣ್ಣಲ್ಲಿ ದಾನ ಕೊಡಲ್ಹೊಲ್ಲದವನೊಡವೆ
ಕಳ್ಳಗೆ ನೃಪಗೆ ಸರ್ವಜ್ಞ”

ಎಂಬ ವಚನದಲ್ಲಿ ಮನುಷ್ಯ ಜಿಪುಣನಾಗಬಾರದೆಂದು ಎಲ್ಲಾ ಇದ್ದಾಗ ದಾನಿಯಾಗಬೇಕೆಂದು ವ್ಯಕ್ತಪಡಿಸುತ್ತಾ ಸಂಪತ್ತು ಇದ್ದಾಗ ಊಟ ಮಾಡದೆ ಬಟ್ಟೆ ತೊಡದೆ ಜಿಪುಣನಾಗಿ ಒಡವೆಗಳನ್ನು ಕೂಡಿ ಹಾಕಿದರೆ ಪ್ರಯೋಜನವಿಲ್ಲವೆಂದು ಸಂಪತ್ತೆಲ್ಲವೂ ಎಂದಾದರೊಂದು ದಿನ ಕಳ್ಳನ ವಶವಾಗುತ್ತದೆ ಎಂದು ಎಚ್ಚರಿಕೆಯನ್ನು ನೀಡಿದ್ದಾನೆ. ಶ್ರೀಮಂತರು ಎಲ್ಲಾ ಉಳ್ಳವರಾಗಿದ್ದುರಿಂದ ದಾನಮಾಡುವ ಮನಸ್ಸನ್ನು ಹೊಂದಿರಬೇಕೆಂದು ಸರ್ವಜ್ಞ ತಿಳಿಸಿದ್ದಾನೆ. ಸರ್ವಜ್ಞ ಹೆತ್ತ ತಾಯಿಯ ಮಹತ್ವ ಎಷ್ಟೆಂಬುದನ್ನು

“ಸತ್ಯಕ್ಕೆ ಸೋಲಿಲ್ಲ ಮಿಥ್ಯಕ್ಕೆ ಗೆಲುವಿಲ್ಲ
ಹೆತ್ತಮ್ಮನಿಗಿಂತ ಹಿತರಿಲ್ಲ ನರರೊಳಗೆ
ಉತ್ತಮರೆ ದೈವ ಸರ್ವಜ್ಞ”

ಎಂಬ ವಚನ ತಿಳಿಸಿದ್ದಾನೆ. ಸತ್ಯ ಮಿಥ್ಯಗಳಲ್ಲಿ ಸತ್ಯಕ್ಕೆ ಮಾತ್ರ ಗೆಲುವು ಇದ್ದೇ ಇರುತ್ತದೆ. ಮಿಥ್ಯವೂ ಗೆಲ್ಲಲಿಕ್ಕೆ ಅಸಾಧ್ಯವೆಂದು ಬಣ್ಣಿಸುತ್ತ ಹೆತ್ತ ತಾಯಿ ಸತ್ಯಕ್ಕೆ ಹತ್ತಿರವಾಗಿರುತ್ತಾಳೆ. ಹೆತ್ತ ತಾಯಿಗಿಂತ ಹಿತರಾದವರು ಈ ಪ್ರಪಂಚದಲ್ಲಿ ಯಾರೂ ಇಲ್ಲವೆಂದು ವ್ಯಾಖ್ಯಾನಿಸಿದ್ದಾನೆ. ಹೆತ್ತತಾಯಿ ಮಾತ್ರ ಉತ್ತಮಳು ಎಂದರೆ ನಾವು ಅವಳಿಗೆ ಕೊಡುವ ಗೌರವ. ಹೆತ್ತವಳಿಲ್ಲದಿದ್ದರೆ ನಮ್ಮ ಬದುಕು ದುಸಾಧ್ಯ ಎನ್ನುತ್ತಾ ಹೆತ್ತಮ್ಮಳೇ ಸತ್ಯವೆಂದು ಘೋಷಿಸಿದ್ದಾನೆ. ನಮ್ಮ ಕಣ್ಣಿಗೆ ಕಾಣುವ ಸತ್ಯ ತಾಯಿ ಒಬ್ಬಳೇ ಎನ್ನುವುದು ಕೂಡ ಈ ತ್ರಿಪದಿಯ ಆಶಯವಾಗಿದೆ. ಹೆತ್ತಮ್ಮಳೇ ಉತ್ತಮಳು ಎಂಬುದಾಗಿ ಗ್ರಹಿಸಿದರೆ ಮಾತ್ರ ಸತ್ಯದ ಕಡೆಗೆ ಇದ್ದೇವೆ ಎಂದು ಸಾಬೀತಾಗುತ್ತದೆ. ಜೀವನ ಪಯಣದಲ್ಲಿ ಅವಳ ಪಾತ್ರ ಅತ್ಯಂತ ಅಮೂಲ್ಯವಾದುದಾಗಿದೆ. ಸರ್ವಜ್ಞ

“ಬೆಚ್ಚನೆ ಮನೆ ಇರಲು ವೆಚ್ಚಕ್ಕೆ ಹೊನ್ನಿರಲು
ಇಚ್ಛೆಯನ್ನರಿವ ಸತಿಯಿರಲು ಸ್ವರ್ಗಕ್ಕೆ
ಕಿಚ್ಚು ಹಚ್ಚೆಂದ ಸರ್ವಜ್ಞ

ಎಂಬ ವಚನದಲ್ಲಿ ಸಮಾಜಮುಖಿಯಾಗಿರುವ ಮನೆಯ ಸುಸ್ಥಿತಿಯ ಬಗ್ಗೆ ವ್ಯಕ್ತಪಡಿಸಿದ್ದಾನೆ. ಮನುಷ್ಯ ನೆಮ್ಮದಿಯಿಂದ ಜೀವಿಸಬೇಕಾದರೆ ಹೆಣ್ಣು, ಹೊನ್ನು, ಮಣ್ಣು ಮೂರನ್ನು ಹೊಂದಿರಬೇಕು. ಇವುಗಳಿದ್ದರೇ ಇಲ್ಲೆ ಸ್ವರ್ಗ ಸೃಷ್ಟಿಯಾಗುವುದರಲ್ಲಿ ಸಂಶಯವಿಲ್ಲ. ಸ್ವರ್ಗದ ಕಲ್ಪನೆ ನಮ್ಮ

ಸುಖಕರವಾದ ಬದುಕಿನಲ್ಲಿ ಅಡಗಿದೆ. ಬೆಚ್ಚನೆಯ ಮನೆ, ಖರ್ಚುಗಳಿಗೆ ಹೊನ್ನು, ಪತಿಯ ಇಚ್ಛೆಯನ್ನರಿತ ಹೆಂಡತಿ ಇದ್ದಾಗ ಕಲ್ಪನೆಯ ಸ್ವರ್ಗಕ್ಕೆ ಬೆಂಕಿ ಹಚ್ಚುವುದು ಸೂಕ್ತವೆನ್ನುವ ಮೂಲಕ ಸತಿಗೆ ಅತ್ಯುತ್ತಮ ಮೌಲ್ಯವನ್ನು ನೀಡಿದ್ದಾನೆ.

“ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ
ನಡುವೆ ಎತ್ತಣದು ಸರ್ವಜ್ಞ”

ಎಂಬ ವಚನದಲ್ಲಿ ಸರ್ವಜ್ಞ ಕುಲ ಗೋತ್ರಗಳು, ಮೇಲು ಕೀಳೆಂಬ ಅಸಮಾನತೆ ಇರಬಾರದೆಂಬ ಮೌಲ್ಯದ ಕಡೆಗೆ ಹೆಚ್ಚು ಒತ್ತನ್ನು ನೀಡಿದ್ದಾನೆ. ಆ ಜಾತಿ ಈ ಜಾತಿ ಎಂದು ಏಕೆ ನಮ್ಮೊಳಗೆ ಇರಬೇಕೆಂಬ ಪ್ರಶ್ನೆಯನ್ನು ಎತ್ತುವ ಮೂಲಕ ಜಾತಿಭೇದಭಾವ ಇರಲೇ ಬಾರದೆಂಬುದರ ಕಡೆಗೆ ಹೆಚ್ಚು ಆದ್ಯತೆಯನ್ನು ನೀಡಿದ್ದಾನೆ. ನಾವು ನಡೆಯಲಿಕ್ಕೆ ಭೂಮಿ ಒಂದೇ ಇದೆ ಕುಡಿಯುವುದಕ್ಕೆ ಬಳಸುವ ನೀರು ಒಂದೇ ಹಾಗೂ ಜೀವನ ಸಾಗಿಸಲು ಹೊಟ್ಟೆ ತುಂಬಿಸಿಕೊಳ್ಳುವಲ್ಲಿ ಬಳಸುವ ಅಗ್ನಿಯು ಒಂದೇ ಎನ್ನುತ್ತ ಪಂಚಭೂತಗಳಾದ ಇವುಗಳಲ್ಲಿ ಭೇದಭಾವವಿಲ್ಲ. ಹಾಗಾಗಿ ಪ್ರಕೃತಿಯಲ್ಲಿರುವ ಏಕತೆ ನಮ್ಮಲ್ಲಿ ಯಾಕೆ ಇಲ್ಲ ಎಂಬುದು ಸರ್ವಜ್ಞನ ದೃಷ್ಟಿಯಲ್ಲಿ ಪ್ರಮುಖವಾದ ಆಶಯವಾಗಿದೆ. ನಾವು ಜಾತಿಯ ಹೆಸರಿನಲ್ಲಿ ಭೇದಭಾವ ಮಾಡದೇ ಏಕತೆಯಿಂದ ಸಾಗಬೇಕೆಂದು ತಿಳಿಸಿದ್ದಾನೆ. ನಮ್ಮ ನಡುವೆ ಕುಲ ಗೋತ್ರಗಳು ಇರಬಾರದೆಂದು ಸಾರುತ್ತ ವಿಶ್ವ ಮಾನವ ಸಂದೇಶವನ್ನು ಈ ವಚನದಲ್ಲಿ ನೀಡಿದ್ದಾನೆ. ಸರ್ವಜ್ಞನ ವಚನಗಳಲ್ಲಿಯೇ ಈ ವಚನ ಅತ್ಯಂತ ಜನಮನ್ನಣೆಯನ್ನು ಇದುಗಳಿಸಿದ್ದು ಜೀವನ ಮೌಲ್ಯಗಳಲ್ಲಿ ಪ್ರಮುಖವಾದ ಮೌಲ್ಯವಾಗಿದೆ. ಕರುನಾಡ ತ್ರಿಪದಿಗಳ ಬ್ರಹ್ಮನಾದ ಸರ್ವಜ್ಞನು

“ಜಾತಿ ಹೀನ’ನ ಮನೆಯ ಜ್ಯೋತಿ ತಾ ಹೀನವೇ
ಜಾತಿ ವಿಜಾತಿ ಎನಬೇಡ ದೇವ ನೊಲಿ
ದಾತನೆ ಜಾತ ಸರ್ವಜ್ಞ”

ಎಂಬ ವಚನದಲ್ಲಿ ಜಾತಿ ಸುಳ್ಳೆಂದು ದೇವರನ್ನು ನಂಬಿರುವ ವ್ಯಕ್ತಿ ಮಾತ್ರ ಒಳ್ಳೆಯ ವ್ಯಕ್ತಿ ಎಂದು ತಿಳಿಸಿದ್ದಾನೆ. ಜಾತಿ ಹೀನನು ಜನಸಮುದಾಯದಲ್ಲಿ ಎಲ್ಲರಿಂದ ಕಡೆಗಣಿಸಲ್ಪಟ್ಟು ಬಹಳ ಹಿಂಸೆಯನ್ನು ಅನುಭವಿಸಿ ದೂರ ಉಳಿದು ನೊಂದವನನ್ನು. ಜಾತಿ-ವಿಜಾತಿಎನ್ನದೆ ಜಾತಿಹೀನನ್ನೊಂದಿಗೆ ಒಂದಾಗಿ ದೇವನಿಗೆ ಸಲ್ಲುವವನಾದರೆ ಅವನೇ ಜಾತನಾಗುತ್ತಾನೆಂದು ಬಣ್ಣಿಸಿದ್ದಾನೆ.

“ಮುಟ್ಟಾದ ಹೊಲೆಯೊಳಗೆ ಹುಟ್ಟಿಹುದು ಜಗವೆಲ್ಲ
ಮುಟ್ಟಬೇಡೆಂದು ತೊಲಗುವ ಹಾರುವನು
ಹುಟ್ಟಿದನು ಎಲ್ಲಿ ಸರ್ವಜ್ಞ”

ಎಂಬ ಈ ವಚನದಲ್ಲಿ ಸರ್ವಜ್ಞನು ಈ ಲೋಕದ ಆಶ್ರಯದಲ್ಲಿ ಬೆಳೆದಿದ್ದರಿಂದ ಜಾತಿ ಮತದ ಹಂಗನ್ನು ತೊರೆಯಬೇಕೆಂದು ಮುಟ್ಟು ಅಪವಿತ್ರವಲ್ಲ ಅದೊಂದು ಸ್ವಾಭಾವಿಕ ಕ್ರಿಯೆ. ಮುಟ್ಟು ಸೃಷ್ಟಿಗೆ ಮೂಲ. ಅದನ್ನು ಅಲ್ಲಗಳೆಯದೆ ಆರಾಧಿಸಬೇಕೆಂದು ಹೇಳುತ್ತಾ ಬ್ರಾಹ್ಮಣ ನಡೆಸುವ ಮಡಿ ಮೈಲಿಗೆಯನ್ನು ಖಂಡಿಸಿದ್ದಾನೆ. ಇಡೀ ಜಗತ್ತು ಹುಟ್ಟಿರುವುದೇ ಮುಟ್ಟಾದ ಹೊಲೆಯಲ್ಲಿ. ಹೊಲೆಯರನ್ನು ಮುಟ್ಟಬೇಡಿ ಎನ್ನುವುದು ಸರಿಯಾದ ವಿವೇಚನೆಯಲ್ಲ ಎನ್ನುತ್ತಲೇ ಹಾರುವವನು ಹುಟ್ಟಿರುವುದು ಕೂಡ ತಾಯಿಯ ಗರ್ಭದಲ್ಲಿ ಎಂಬ ಜ್ಞಾನವನ್ನು ಮೂಡಿಸಿದ್ದಾನೆ. ಮುಟ್ಟಬೇಡವೆಂದ ಹಾರುವವನು ಎಲ್ಲಿ ಹುಟ್ಟಿ ಬಂದನು ಎಂಬ ಪ್ರಶ್ನೆಯನ್ನು ಕೇಳುತ್ತ ಬ್ರಾಹ್ಮಣ ಸಮಾಜವನ್ನು ಎಚ್ಚರಿಸಿದ್ದಾನೆ. ವಿದ್ಯೆಯುಳ್ಳವನಿಗೆ ಎಲ್ಲೆಲ್ಲೂ ಗೌರವ ಸಿಕ್ಕೇ ಸಿಗುತ್ತದೆ ಎಂದು ತಿಳಿದ ಸರ್ವಜ್ಞ

“ವಿದ್ಯೆ ಕಲಿಸದ ತಂದೆ ಬುದ್ಧಿ ಹೇಳದ ಗುರುಗಳು
ಬಿದ್ದಿರಲು ಬಂದು ನೋಡದ ತಾಯಿಯು
ಶುದ್ಧ ವೈರಿಗಳು ಸರ್ವಜ್ಞ”

ಎಂಬ ವಚನದಲ್ಲಿ ವಿದ್ಯೆ ಕಲಿಸದ ತಂದೆ ತಾಯಿಗಳು ಯಾವತ್ತಿದ್ದರೂ ಶುದ್ಧ ವೈರಿಗಳಾಗುತ್ತಾರೆ. ಬುದ್ಧಿ ಕಲಿಸದ ಗುರುವು ಕೂಡ ವಿದ್ಯಾರ್ಥಿಗಳ ಜೀವನದಲ್ಲಿ ಶುದ್ಧ ವೈರಿ ಎಂದು ವಿವೇಚಿಸಿದ್ದಾನೆ. ವಿದ್ಯೆ ಕಲಿಸುವ ಮೂಲಕ ಮಕ್ಕಳಲ್ಲಿ ವಿದ್ಯಾರ್ಥಿಗಳಲ್ಲಿ ಮಿತ್ರರಾಗಬೇಕೆಂದು

ಅರಿವು ಮೂಡಿಸಿದ್ದಾನೆ. ಇದರಿಂದ ವಿದ್ಯಾರ್ಥಿಯ ಭವಿಷ್ಯ ಹಸನವಾಗುವುದು ಎಂಬ ಮಹತ್ತರವಾದ ವಿಚಾರವನ್ನು ತಿಳಿಸಿದ್ದಾನೆ. ಹಾಗೆಯೇ ಸಮಾಜದಲ್ಲಿ ಒಳ್ಳೆಯವರ ಸಹವಾಸವನ್ನು ಮಾಡಬೇಕೆಂದು ಒಳ್ಳೆಯ ಜೀವನ ಮೌಲ್ಯವನ್ನು ಸರ್ವಜ್ಞನು ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ ಬಲ್ಲವರ ಒಡನಾಟ ಬೆಲ್ಲವನ್ನು ಮೆದ್ದಂತೆ ಎಂಬ ವಚನಗಳ ಸಾಲುಗಳಲ್ಲಿ ಅಂತರ್ಗತಗೊಳಿಸಿದ್ದಾನೆ.

"ಆಡದೇ ಮಾಡುವನು ರೂಢಿಯೊಳಗುತ್ತಮನು
ಆಡಿ ಮಾಡುವನು ಮಧ್ಯಮನು
ಆಡಿಯೂ ಮಾಡವದನು ಅಧಮ ತಾ ಸರ್ವಜ್ಞ।

ಎಂಬ ವಚನದಲ್ಲಿ ವಚನಕಾರರ ನಡೆದಂತೆ ನುಡಿಯಬೇಕೆಂಬ ಆಶಯದಂತೆ ಸರ್ವಜ್ಞನು ಮನುಷ್ಯನು ಜಂಭಕೊಚ್ಚಿಕೊಳ್ಳದೇ ತಾನಾಡಿದಂತೆ ನಡೆದುಕೊಳ್ಳಬೇಕೆಂದು ಉತ್ತಮವಾದ ಮಾತಿರಬೇಕೆಂದು ತಿಳಿಸುತ್ತಾ ಆಡಿ ಮಾಡದವನು ಅಧಮನಾಗುತ್ತಾನೆಂದು ತಿಳಿಸಿದ್ದಾನೆ. ಅಷ್ಟೇ ಅಲ್ಲದೇ "ಮಾತಿನಿಂ ನಗೆ ನುಡಿಯು, ಮಾತಿನಿಂ ಹಗೆ ಕೊಲೆಯು ಮಾತಿನಿಂ ಸಕಲ ಸಂಪದವು ಲೋಕಕ್ಕೆ ಮಾತೆ ಮಾಣಿಕ್ಯವು ಸರ್ವಜ್ಞ" ಎಂಬ ವಚನದಲ್ಲಿ ಮಾತಿನ ಮಹತ್ವವನ್ನು ತಿಳಿಸಿದ್ದಾನೆ. ಮಾತಿನಿಂದ ನಗುವುದಕ್ಕೆ, ಮಾತಿನಿಂದ ದ್ವೇಷ–ಕೊಲೆ, ಮಾತಿನಿಂದ ಸಕಲ ಸಂಪತ್ತು ದೊರೆಯುವುದೆಂದು ತಿಳಿಸಿದ್ದಾನೆ. ಮಾತಿಲ್ಲದಿದ್ದರೆ ಲೋಕ ಸ್ತಬ್ಧವಾಗುವುದೆಂಬ ಚಿರಸತ್ಯವನ್ನು ನುಡಿದಿದ್ದಾನೆ. ಸರ್ವಜ್ಞನು ಸಮಾಜದಲ್ಲಿ ಜೀವಿಸುವ ಬಡಜನರ ಸಂಕಷ್ಟಗಳನ್ನು ಅರ್ಥ ಮಾಡಿಕೊಂಡು ಸಾಲಕ್ಕೆ ಬಿದ್ದು ಒದ್ದಾಡುವವರನ್ನು ಕಂಡು ಜೀವನದಲ್ಲಿ ಸಾಲವನ್ನು ಮಾತ್ರ ಎಂದಿಗೂ ಮಾಡಬಾರದೆಂದು ನಿರೂಪಿಸುತ್ತಾ.

"ಸಾಲವನು ಕೊಂಬಾಗ ಹಾಲೋಗರುಂಡಂತೆ
ಸಾಲಿಗನು ಬಂದು ಎಳೆವಾಗ ಕಿಬ್ಬದಿಯ
ಕೀಲು ಮುರಿದಂತೆ ಸರ್ವಜ್ಞ"

ಎಂಬ ವಚನದಲ್ಲಿ ಸಾಲದಿಂದಾಗುವ ಅನಾಹುತಗಳನ್ನು ತಿಳಿಸಿದ್ದಾನೆ. ಜೀವನದಲ್ಲಿ ಸುಖವಾಗಿರಬೇಕಾದರೆ ಸಾಲ ಮಾಡದೇ ಜೀವನವನ್ನು ನಡೆಸಬೇಕೆಂಬ ಮುಖ್ಯವಾದ ಕರೆಯೊಂದಿಗೆ ಜೀವನ ಮೌಲ್ಯವನ್ನು ವ್ಯಕ್ತಪಡಿಸಿದ್ದಾನೆ. ಸಾಲವನ್ನು ಮೊದ ಮೊದಲು ಪಡೆಯುವಾಗ ಬಹಳ ಆಸಕ್ತಿಯಿಂದ ಆನಂದದಿಂದ ಮುನ್ನುಗ್ಗುತ್ತೇವೆ. ಆದರೆ ಸಾಲ ತೀರಿಸುವಾಗ ಎಡವುತ್ತೇವೆ. ಸಾಲಿಗನು ಸಾಲವನ್ನು ವಾಪಸ್ಸು ಪಡೆಯಲು ಬಂದಾಗ ದುಃಖ ಹೆಚ್ಚಾಗಿ ಬಾಧೆಗೆ ಸಿಕ್ಕಿಕೊಳ್ಳುತ್ತೇವೆ. ಕೊನೆಗೆ ಸಾಲವನ್ನು ಹಿಂದಿರುಗಿಸದೇ ಇದ್ದಾಗ ಸಾಲಿಗನು ಮೂಳೆಯನ್ನು ಮುರಿಯದೇ ಬಿಡಲಾರನು ಎಂಬ ನಿಜಸತ್ಯವನ್ನು ತಿಳಿಸಿದ್ದಾನೆ. ೧೨ನೇ ಶತಮಾನದ ಶರಣರಿಂದ ಪ್ರಭಾವಕ್ಕೊಳಗಾದ ಸರ್ವಜ್ಞನು ೧೬ನೇ ಶತಮಾನದಲ್ಲಿ ತನ್ನದೇ ಆದ ಶೈಲಿಯಲ್ಲಿ ವಚನಗಳ ಮೂಲಕ ಜನಸಾಮಾನ್ಯರಿಗೆ ಜೀವನ ಮೌಲ್ಯಗಳ ಬಗ್ಗೆ ಜೀವವನ್ನು ತೆಗೆಯಬಾರದೆಂದು. ಜೀವ ತೆಗೆದರೆ ಅವನು ಪಾಪಪ್ರಜ್ಞೆಯನ್ನು ಹೊಂದುವನೆಂದು ತಿಳಿಸುತ್ತಾ

"ಜೀವಿ ಜೀವಿಯ ತಿಂದು ಜೀವಿಪುದು ಜಗವೆಲ್ಲಾ
ಜೀವ ತುಂಬುವನು ಪರಮಾತ್ಮ ನರರೊಳಗೆ
ಜೀವ ತೆಗೆಯುವನು ಪಾಪಾತ್ಮ ಸರ್ವಜ್ಞ"

ಎಂಬ ವಚನದಲ್ಲಿ ಸತ್ಯವನ್ನು ನುಡಿದಿದ್ದಾನೆ. ಆಹಾರ ಸರಪಳಿಯ ಪ್ರಕಾರ ಜೀವಿ ಮತ್ತೊಂದು ಜೀವಿಯನ್ನು ತಿನ್ನುವ ಮೂಲಕ ಆಹಾರವನ್ನು ಅವಲಂಬಿಸಿರುತ್ತದೆ. ಈ ಪ್ರಜ್ಞೆಯನ್ನು ಹೊಂದಿದ್ದ ಸರ್ವಜ್ಞ ಜೀವಿಯನ್ನು ಕೊಲ್ಲಬಾರದೆಂದು ಜೀವವನ್ನು ಭಗವಂತ ಮಾತ್ರ ಕೊಡುತ್ತಾನೆ ಎಂದು ತಿಳಿಸುತ್ತಾ ಜೀವ ತೆಗೆಯುವವನು ಪಾಪಿಯಾಗುತ್ತಾನೆ. ಅಷ್ಟೇ ಅಲ್ಲದೆ ಜೀವ ತೆಗೆಯುವುದಾದರೆ ಜೀವ ನೀಡುವ ಶಕ್ತಿಯನ್ನು ಮನುಷ್ಯ ಹೊಂದಿರಬೇಕು ಆಗ ಮಾತ್ರ ಮನುಷ್ಯ ಜೀವನ ಮೌಲ್ಯಗಳನ್ನು ಉಳಿಸಿದಂತಾಗುತ್ತದೆ. ಜೈನ ಧರ್ಮದ ಪ್ರಕಾರ ಜೀವದಯೆ ಎಷ್ಟು ಮುಖ್ಯವೋ ಅಷ್ಟೇ ಸರ್ವಜ್ಞನ ಈ ತ್ರಿಪದಿಯು ಅತ್ಯಂತ ಮಹತ್ವದ್ದಾಗಿದೆ. ಈ ವಚನಕ್ಕೆ ಸರಿಸಾಟಿಯಾಗಿ ಸರ್ವಜ್ಞನು

"ಕಣ್ಣು ನಾಲಿಗೆ ಮನವು ತನ್ನದೆಂದೆನ್ನ ಬೇಡ
ಅನ್ಯರನು ಕೊಂದರೆನಬೇಡ ಇವು ಮೂರು
ತನ್ನನ್ನೆ ಕೊಲ್ಲುವವು ಸರ್ವಜ್ಞ"

ಎಂಬ ತ್ರಿಪದಿಯಲ್ಲಿ ಬೇರೆಯವರನ್ನು ಕೊಲ್ಲುವುದರಲ್ಲಿ ನಾವು ಮುಳುಗಿದರೆ ಆ ಮೋಸ ನಮ್ಮನ್ನೇ ಕೊಲ್ಲುವಂತೆ ಪ್ರೇರಣೆಯಾಗುತ್ತದೆ ಎಂದು ತಿಳಿಸಿದ್ದಾನೆ. ನಮ್ಮ ಕಿಚ್ಚು ನಮ್ಮನ್ನೇ ಸುಡುತ್ತದೆಯೇ ವಿನಃ ಬೇರೆಯವರ ಮನೆಯನ್ನು ಸುಡುವುದಿಲ್ಲ ಎಂಬ ವಚನಕಾರರ ಧೋರಣೆಯಂತೆ ಸರ್ವಜ್ಞ ಕೊಲ್ಲುವುದು ಉಚಿತವಲ್ಲ ಎಂಬುದರ ಮೂಲಕ ಜೀವನ ಮೌಲ್ಯವನ್ನು ಸಾರಿದ್ದಾನೆ. ಮನುಷ್ಯ ಜೀವನದಲ್ಲಿ ಸುಳ್ಳು ಹೇಳಬಾರದೆಂಬ ಅರಿವನ್ನು ಸರ್ವಜ್ಞ ತಿಳಿಸುತ್ತಲೇ ಸುಳ್ಳು ಹೇಳಿದವನಿಗೆ ನರಕ ಪ್ರಾಪ್ತಿಯಾಗುವುದೆಂದು ಸಾರುತ್ತಾ

"ಜಗತ್ತಿಕ್ಕಂಜಿ ಸತ್ಯ ಬಚ್ಚಿಟ್ಟಂಗೆ ಹಣದಾಸೆಗೆ
ಸುಳ್ಳು ಹೇಳಿದಂಗೆ ನರಕವು
ತಪ್ಪದು ಸರ್ವಜ್ಞ"

ಎಂಬ ವಚನದಲ್ಲಿ ಅಭಿವ್ಯಕ್ತಿಪಡಿಸಿದ್ದಾನೆ. ಮನುಜ ಎಂದೂ ಸುಳ್ಳನ್ನಾಡದೇ ಸತ್ಯವನ್ನು ಮರೆಮಾಚಬಾರದು. ಹಣದಾಸೆಗೆ ಬಲಿಯಾಗಿ ಮತ್ತೊಬ್ಬರ ಒಳಿತಿಗಾಗಿ ತಾನು ಕಷ್ಟಕೋಟಲೆಗೆ ತುತ್ತಾಗಬಾರದೆಂದು ಸತ್ಯವನ್ನಾಡುವ ಮೌಲ್ಯವನ್ನು ಬೆಳಸಿಕೊಳ್ಳಬೇಕೆಂದು ತಿಳಿಸಿದ್ದಾನೆ. ಸುಳ್ಳುಗಾರರಿಗೆ ನರಕ ಯಾವತ್ತು ತಪ್ಪುವುದಿಲ್ಲವೆಂಬ ಭಯವನ್ನುಂಟುಮಾಡುವುದರೊಂದಿಗೆ ಜೀವನದ ಮೌಲ್ಯದ ಕಡೆಗೆ ಎಚ್ಚರವನ್ನು ನೀಡಿದ್ದಾನೆ. ಸರ್ವಜ್ಞ ಹಾಗೆಯೇ ಡಾಂಭಿಕ ಭಕ್ತಿಯ ಬಗೆಗೆ ತಿಳಿಸುತ್ತಾ "ಚಿತ್ತವಿಲ್ಲದೆ ಗುಡಿಯ ಸುತ್ತಿದೊಡೆ ಫಲವೇನು ಎತ್ತು ಗಾಣವನ್ನು ಹೊತ್ತು ತಾ ನಿತ್ಯದಲ್ಲಿ ಸುತ್ತಿ ಬಂದಂತೆ ಸರ್ವಜ್ಞ" ಎಂಬ ವಚನದಲ್ಲಿ ಮನುಷ್ಯ ಮನಸ್ಸಿನಲ್ಲಿ ದೇವರನ್ನು ನೆನೆಯುವುದರೊಂದಿಗೆ ಧ್ಯಾನಿಸಬೇಕೆಂದು ಹಾಗೂ ಮನಸ್ಸಿನಲ್ಲಿ ಏನನ್ನೊ ನೆನೆಯುತ್ತಾ ಗುಡಿಯನ್ನು ಸುತ್ತಿದರೆ ಪ್ರಯೋಜನವಿಲ್ಲವೆನ್ನುತ್ತಾನೆ. ಎತ್ತು ಗಾಣವನ್ನು ಹೊತ್ತು ನಿತ್ಯದಲ್ಲಿ ಸುತ್ತಿ ಬಂದಂತೆ ಮನುಷ್ಯ ಮಾಡುವ ಭಕ್ತಿಭಾವವಿಲ್ಲದ ಪೂಜೆ ವ್ಯರ್ಥವೆಂದು ತಿಳಿಸಿದ್ದಾನೆ. ಈ ಸಂದರ್ಭದಲ್ಲಿ ದೇವರ ದಾಸಿಮಯ್ಯನ "ಮಠದೊಳಗಣ ಬೆಕ್ಕು ಇಲಿಯ ಕಂಡೊಡನೆ ಪುಟನೆಗೆದಂಥಾಯಿತು ಕಾಣಾ ರಾಮನಾಥ" ಎಂಬ ವಚನವು ಗಮನಾರ್ಹವಾದ ವಚನವಾಗಿದೆ.

"ಎಲ್ಲ ಬಲ್ಲವರಿಲ್ಲ ಬಲ್ಲವರು ಬಹಳಿಲ್ಲ
ಬಲ್ಲಿದರು ಬಲ್ಲನೆಂಬಲ್ಲ ಸುಮ್ಮನಿರುವನೇ
ಎಲ್ಲವನು ಬಲ್ಲ ಸರ್ವಜ್ಞ"

ಎಂಬ ವಚನದಲ್ಲಿ ಸರ್ವಜ್ಞ ಸಮಾಜದಲ್ಲಿ ತಿಳಿದವರು ಸುಮ್ಮನಿರಲಾರರು ಎನ್ನುವಂತೆ ಎಲ್ಲವನ್ನು ತಿಳಿದಿದ್ದೇನೆ ಎನ್ನುವವರು ಇಲ್ಲ. ಬಲ್ಲವರು ಅಧಿಕ ಸಂಖ್ಯೆಯಲ್ಲಿ ಇಲ್ಲ. ತಿಳಿದವರೆಲ್ಲಾ ಎಲ್ಲವನ್ನು ತಿಳಿದಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಇಂಥಹ ಸ್ಥಿತಿಯಲ್ಲಿ ಎಲ್ಲವನ್ನು ತಿಳಿದವನು ಸುಮ್ಮನಿರಲಾರನೆಂದು ಸರ್ವಜ್ಞ ಚಿಂತಿಸಿದ್ದಾನೆ. ಅಲ್ಪಜ್ಞಾನವನ್ನು ಪಡೆದವರು ಎಲ್ಲವನ್ನು ತಿಳಿದಿದ್ದೇನೆಂದು ಬೀಗುತ್ತಾರೆ ಅಷ್ಟೇ. ಆದರೆ ಎಲ್ಲವನ್ನು ಬಲ್ಲವನು ನಾನೇನು ತಿಳಿದಿಲ್ಲ ಎಂಬಂತೆ ತಾಳ್ಮೆಯಿಂದ ಇರುತ್ತಾನೆ. ಜ್ಞಾನದಲ್ಲಿ ಯಾರೂ ಸಮಾನರಲ್ಲ ಎಂಬ ತತ್ವವನ್ನು ಸರ್ವಜ್ಞ ಮನಗಾಣಿಸಿದ್ದಾನೆ. ಸರ್ವಜ್ಞ ಅಪಾರವಾದ ಜ್ಞಾನವನ್ನು ಹೊಂದಿದ್ದರಿಂದಲೇ ಈ ತ್ರಿಪದಿಯನ್ನು ರಚಿಸಲು ಸಾಧ್ಯವಾಯಿತೆಂದರೆ ತಪ್ಪಾಗಲಾರದು, ಸರ್ವಜ್ಞ

"ಹೇಡಿಂಗೆ ಹಿರಿತನವು ಮೂಢಂಗೆ ಗುರುತನವು
ನಾಡ ನೀಚಂಗೆ ದೊರೆತನವು ದೊರೆತರೆ
ನಾಡೆಲ್ಲ ಕೆಡಗು ಸರ್ವಜ್ಞ"

ಎಂಬ ತ್ರಿಪದಿಯಲ್ಲಿ ಹಿರಿತನ, ಗುರುತನ, ದೊರೆತನ ಯಾರಿಗೆ ಸಿಗಬೇಕೋ ಅವರಿಗೆ ಸಿಕ್ಕರೆ ನಾಡು ಸುಭಿಕ್ಷವಾಗುತ್ತದೆ. ಇಲ್ಲವಾದರೆ ನಾಡು ಹಾಳಾಗುವುದರಲ್ಲಿ ಎರಡು ಮಾತಿಲ್ಲ ಎಂಬುದನ್ನು ತಿಳಿಸಿದ್ದಾನೆ. ಹೇಡಿಗಳು, ಮೂಢರು, ನೀಚರು ಎಂದೂ ಸಮಾಜವನ್ನು ಉದ್ಧಾರಮಾಡಲಾರರು ಎಂಬ ಆಲೋಚನೆಯಿಂದ ದೇಶದ ಚುಕ್ಕಾಣಿ ಒಳ್ಳೆಯವರ ಕೈಗೆ ದೊರೆಯುವಂತಾಗಬೇಕೆಂಬುದೇ ಆತನ ಪ್ರಮುಖ ಧ್ಯೇಯವಾಗಿದೆ. ಹೇಡಿಗಳಿಗೆ ಹಿರಿತನ, ಮೂಢರಿಗೆ ಗುರುತನ, ನೀಚರಿಗೆ ದೊರೆತನ ದೊರೆತರೆ ನಾಡು ನಾಶವಾಗುತ್ತದೆ ಎಂಬ ಕಟುಸತ್ಯವನ್ನು ತಿಳಿಸಿದ್ದಾನೆ. ಸರ್ವಜ್ಞ ಆಡುಮುಟ್ಟದ ಸೊಪ್ಪಿಲ್ಲ ಎಂಬ ಗಾದೆಯಂತೆ ಎಲ್ಲವನ್ನು ಬಲ್ಲವನು. ಮನೆಮನೆಗೂ ಭಿಕ್ಷೆ ಬೇಡುತ್ತಾ ಒಂದೊಂದು ಮಾತನ್ನು ಕಲಿತು ಜ್ಞಾನಿಯಾದ ಸರ್ವಜ್ಞ ಮನುಷ್ಯರಿಗೆ ಜೀವನ ಮೌಲ್ಯಗಳ ಬಗ್ಗೆ ಅತ್ಯಧಿಕವಾಗಿ ಅರಿವು ಮೂಡಿಸಿದ್ದಾನೆ. ಜೀವನದಲ್ಲಿ ನಾವು ಹೇಗೆ ನಡೆಯಬೇಕು, ಯಾವ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂಬುದನ್ನು ತುಂಬಿ ತುಳುಕುವಷ್ಟು ವಚನಗಳನ್ನು ರಚಿಸಿಕೊಟ್ಟಿದ್ದಾನೆ. ಸರ್ವಜ್ಞ ಎಲ್ಲಿಯೂ ನಿಲ್ಲದೇ

ಎಲ್ಲಾ ಕಡೆಗೂ ಸಂಚರಿಸುತ್ತಾ ಸಮಾಜದ ಎಲ್ಲಾ ಜನರಲ್ಲಿರುವ ಅಂಕು-ಡೊಂಕುಗಳನ್ನು ಸರಿಪಡಿಸುತ್ತಲೇ ಪರಿಹಾರಗಳನ್ನು ಹುಡುಕುವುದರಲ್ಲಿ ಮಗ್ನನಾಗಿರುವುದು ಆತನ ತ್ರಿಪದಿ ಪ್ರಕಾರದ ವಚನಗಳಲ್ಲಿ ಕಂಡು ಬರುತ್ತದೆ. ಈತ ಗಾದೆ ಮಾತುಗಳಂತೆ ವಚನಗಳನ್ನು ರಚಿಸದ್ದರಿಂದ ಅವನ ತ್ರಿಪದಿಗಳೆಲ್ಲವೂ ಜನಮಾನಸದಲ್ಲಿ ಅಚ್ಚಳಿಯದೇ ನಿಂತಿವೆ. ಸರ್ವಜ್ಞನಂಥ ಹಿತಚಿಂತಕ ಇದ್ದಿದ್ದರಿಂದಲೇ ಜೀವನ ಮೌಲ್ಯಗಳು ಇಲ್ಲಿಯ ತನಕ ಉಳಿದಿವೆ ಎಂದರೆ ಆತನ ಅರ್ಥಪೂರ್ಣ ತ್ರಿಪದಿಗಳೇ ಸಾಕ್ಷಿಯಾಗಿವೆ. ಒಂದೊಂದು ತ್ರಿಪದಿಯೂ ಒಂದೊಂದು ಜೀವನಮೌಲ್ಯವನ್ನು ಸಾರುವ ಹಿರಿದಾದ ಅರ್ಥವನ್ನು ಹೊಂದಿದೆ. ಸರ್ವಜ್ಞ ಎಲ್ಲರನ್ನು ಬಲ್ಲವನಾಗಿದ್ದು ಪ್ರತಿಯೊಬ್ಬನ ಅಂಕುಡೊಂಕುಗಳನ್ನು ಗಮನಿಸುತ್ತಿದ್ದಾನೆಂಬುದಕ್ಕೆ ಆತ ರೂಪಿಸಿದ ತ್ರಿಪದಿಗಳು ಮೂಲ ದಾಖಲೆಯಾಗಿವೆ. ಸಮಾಜವನ್ನು ತಿದ್ದುವ ಮೂಲಕ ಉತ್ತಮ ಸಮಾಜವನ್ನಾಗಿ ಮಾರ್ಪಡಿಸಬೇಕೆಂಬ ಹೆಬ್ಬಯಕೆ ಸರ್ವಜ್ಞನಿಗೆ ಇದ್ದುದ್ದರಿಂದ ಅಪಾರವಾದ ಜ್ಞಾನ ಶಾಖೆಗಳ ಬಗ್ಗೆ ವಚನಗಳೊಂದಿಗೆ ತಿಳಿಸುತ್ತಾ ಜೀವನ ಮೌಲ್ಯಗಳ ಕಡೆಗೆ ಹೆಚ್ಚಿನ ಪ್ರಾಧ್ಯಾನ್ಯತೆಯನ್ನು ನೀಡಿದ್ದಾನೆ.

## ಆಧಾರಗ್ರಂಥಗಳು


೧. ಸರ್ವಜ್ಞ ಕವಿ – ಎ.ಆರ್.ಕೃಷ್ಣಶಾಸ್ತ್ರಿ, ೨ನೇ ಆವೃತ್ತಿ

೨. ಸರ್ವಥಾ ಸರ್ವಜ್ಞ ತಾತ್ಪರ್ಯ ಸಹಿತ ಸರ್ವಜ್ಞ – ಸಂಪಾದಕ– ಡಾ. ನೀ.ಕೃ. ರಾಮಶೇಷನ್–ಬೆಂಗಳೂರು.

೩. ಸರ್ವಜ್ಞನ ಪರಿಚಯ–ಕಣಜ–ಕರ್ನಾಟಕ ಸರ್ಕಾರ

೪. ಸರ್ವಜ್ಞ ವಚನಗಳ ಓದು – ಸಂಪಾದಕರು – ಸಿ.ಪಿ–ನಾಗರಾಜ

೫. ಸರ್ವಜ್ಞನ ವಚನಗಳು – ಸಂಪಾದಕರು – ಡಾ.ಕೆ.ಆರ್. ಗಣೇಶ್

೬. ಸರ್ವಜ್ಞ ವಚನಗಳು – ವೆಂಕಟಸುಬ್ಬಯ್ಯ

೭. ಸರ್ವಜ್ಞ ಕಥನ – ಸಂಪಾದಕರು – ಸು. ರುದ್ರಮೂರ್ತಿ ಶಾಸ್ತ್ರಿ–ಪಿ.ಹೆಚ್ ಪ್ರಕಾಶನ